

ವಿದೇಶದಲ್ಲಿ, ಅಂದರೆ ನ್ಯೂಯಾರ್ಕ್‌ನಲ್ಲಿ ನೃತ್ಯ ಪ್ರಸ್ತುತಪಡಿಸಿದ್ದು ರಾಮ್ ಗೋಪಾಲ್ ತಂಡದಲ್ಲಿಯೇ. ನ್ಯೂಯಾರ್ಕ್ ಸಿಟಿ ಸೆಂಟರ್‌ನಲ್ಲಿ (ಈಗದು ಇಲ್ಲ) ನಾನು ಮೊತ್ತ ಮೊದಲ ಬಾರಿ ಬ್ಯಾಲೆ ನೋಡಿದ್ದು. ಅಲೆಕ್ಸಾಂಡ್ರಿಯಾ, ಡೆನಿಲೊವಾ, ರ್ಥಿಯಾ ಬುಷೆಂಕಾ, ಮುಂತಾದ ಬ್ಯಾಲೆಗಳು. ಇನ್ನು ಕೆಲವದರ ಹೆಸರು ಉಚ್ಚರಿಸಲು ಬರುವುದಿಲ್ಲ ನನಗೆ. ಆದರೆ ಅವುಗಳು ಸುಂದರವಾಗಿ ಮತ್ತು ಶಿಸ್ತುಬದ್ಧವಾಗಿ ಇದ್ದವು; ಕನಸಿನ ಲೋಕವನ್ನೇ ಪ್ರವೇಶಿಸಿದಂತಹ ಅನುಭವವನ್ನು ಕೊಡುವ ಪ್ರದರ್ಶನಗಳಾಗಿದ್ದವು. ದೇಹದ ಭಾರವೇ ಇಲ್ಲದೆ ತೇಲಾಡುವ ಅಪ್ಸರೆಯರಂತೆ ಅವರೆಲ್ಲ ಗೋಚರಿಸುತ್ತಿದ್ದರು. ಬೆಳ್ಳಗಿನ ತಳಿರಿನಂತೆ ಕಾಣುತ್ತಿದ್ದರು. ನೃತ್ಯದ ಬಳಿಕ ಅವರನ್ನೆಲ್ಲ ನಾವು ಭೇಟಿಯಾದರೆ, ನಮ್ಮಂತೆಯೇ ಅವರು ಮನುಷ್ಯರಾಗಿದ್ದರು ಎಂದು ನಂಬುವುದಕ್ಕೇ ನನಗೆ ಕಷ್ಟವಾಗುತ್ತಿತ್ತು.

ನಾನು ಸ್ವೀಡನ್, ಡೆನ್ಮಾರ್ಕ್, ಪ್ಯಾರಿಸ್ ಮುಂತಾದ ಕಡೆಗಳಲ್ಲಿ ಬ್ಯಾಲೆಗಳನ್ನು ನೋಡಿದ್ದೇನೆ. ಅನಾ ಪಾವ್ಲೋವಾ ಮತ್ತು ಯೂರಿ ಗ್ಯಾಗರಿನ್ ಬ್ಯಾಲೆಗಳು ತುಂಬ ಪ್ರಸಿದ್ಧವಾಗಿದ್ದವು. ಸಂಗೀತ, ಆಹಾರ್ಯ ಮತ್ತು